ಅ) ಕಳೆದ ಶೈಕ್ಷಣಿಕ ವರ್ಷದಲ್ಲಿ ವೈದ್ಯಕೀಯ ಶಿಕ್ಷಣಕ್ಕೆ ಪ್ರವೇಶ ಪಡೆದ ಒಟ್ಟು ವಿದ್ಯಾರ್ಥಿಗಳಲ್ಲಿ ರಾಜ್ಯದ ಹೊರ ರಾಜ್ಯದ ಹಾಗೂ ಹೊರ ದೇಶದವರು ಎಷ್ಟು;

ಇ) ರಾಜ್ಯದಲ್ಲಿ ಎಂ.ಬಿ.ಬಿ.ಎಸ್. ಪಾಸಾದ ಎಷ್ಟು ವೈದ್ಯರು ಗ್ರಾಮೀಣ ಭಾಗದಲ್ಲಿ ಕಡ್ಡಾಯ ಸೇವೆ ಮಾಡುತ್ತಿದ್ದಾರೆ;

ಈ) ಎಷ್ಟು ವಿದ್ಯಾರ್ಥಿಗಳು ಕಡ್ಡಾಯ ಗ್ರಾಮೀಣ ಸೇವೆ ಷರತ್ತು ಪೂರೈಸಿಲ್ಲ;

ಉ) ಗ್ರಾಮೀಣ ಸೇವೆ ಷರತ್ತು ಪೂರೈಸದಿದ್ದಲ್ಲಿ ಅಂತಹ ವೈದ್ಯರ ಮೇಲೆ ಏನು ಕ್ರಮ ಕೈಗೊಳ್ಳಲಾಗಿದೆ:

ಶ್ರೀ ಇಕ್ಬಾಲ್ ಅನ್ಸಾರಿ, (ವೈದ್ಯಕೀಯ ಶಿಕ್ಷಣ ಸಚಿವರು)

ಅ) ಸರ್ಕಾರದ ಸಾಮಾನ್ಯ ಪ್ರವೇಶ ಪರೀಕ್ಷೆಯ ಮೂಲಕ ವೈದ್ಯಕೀಯ – 1796 ಮೇಲ್ಕಂಡ ಅಭ್ಯರ್ಥಿಗಳು ರಾಜ್ಯದ ಎಲ್ಲಾ 27 ಜಿಲ್ಲೆಗಳಿಗೂ ಸೇರಿದವರಾಗಿರುತ್ತಾರೆ.

ಆ) ಆಡಳಿತ ಮಂಡಳಿಯ ಕೋಟಾದ ಸೀಟುಗಳು ಸೇರಿದಂತೆ ಒಟ್ಟು ಸೀಟುಗಳು 2004–05ನೇ ಸಾಲಿನಲ್ಲಿ :

	ವೈದ್ಯಕೀಯ
ರಾಜ್ಯದ ಅಭ್ಯರ್ಥಿಗಳು	1973
ಹೊರ ರಾಜ್ಯದ ಅಭ್ಯರ್ಥಿಗಳು	938
ಹೊರ ದೇಶದವರು	23

ಇ) ಎಂ.ಬಿ.ಬಿ.ಎಸ್. ಪಾಸಾದ ಎಲ್ಲಾ ಅಭ್ಯರ್ಥಿಗಳಿಗೆ ಕಡ್ಡಾಯ ಗ್ರಾಮೀಣ ಸೇವೆ ಈ ಹಿಂದೆ ನಿಗದಿಪಡಿಸಿರುವುದಿಲ್ಲ.

ಈ) ಅನ್ವಯಿಸುವುದಿಲ್ಲ.

ಉ) ಉದ್ಭವಿಸುವುದಿಲ್ಲ.

5785 (6584) ಶ್ರೀ ಪ್ರಭಾಕರ ಬಂಗೇರ .ಕೆ (ಬೆಳ್ತಂಗಡಿ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ವ ಶಿಕ್ಷಣ ಅಭಿಯಾನ ಯೋಜನೆಯ ಅನ್ವಯ ಬೆಳ್ತಂಗಡಿ ತಾಲ್ಲೂಕಿನಲ್ಲಿ ಕೈಗೊಂಡ ಯೋಜನೆಯ ವಿವರಗಳೇನು;

ಆ) 200405 ಮತ್ತು 200506ನೇ ಸಾಲಿಗೆ ಅನ್ವಯವಾಗುವಂತೆ ಸರ್ವಶಿಕ್ಷಣ ಅಭಿಯಾನ ಯೋಜನೆಯಡಿಯಲ್ಲಿ ಹಮ್ಮಿಕೊಂಡ ಕಾರ್ಯ ಕ್ರಮಗಳ ವಿವರಗಳೇನು;

ಇ) ಚಿಣ್ಣರ ಕರ್ನಾಟಕ ದರ್ಶನ ಕಾರ್ಯಕ್ರಮದಡಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಎಷ್ಟು ನಿಗದಿತ ವರ್ಗದ ಮಕ್ಕಳಿಗೆ ಸೌಲಭ್ಯವನ್ನು ಒದಗಿಸಿಕೊಡಲಾಗಿದೆ.

ಶ್ರೀ ಆರ್. ರಾಮಲಿಂಗರೆಡ್ಡಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು)

ಅ) ಬೆಳ್ತಂಗಡಿ ತಾಲ್ಲೂಕಿನಲ್ಲಿ 2001–02 ರಿಂದ 2004–05ರವರೆಗೆ ಸರ್ವ ಶಿಕ್ಷಣ ಅಭಿಯಾನ ಯೋಜನೆಯಡಿಯಲ್ಲಿ ಕೈಗೊಂಡಿರುವ ಕಾರ್ಯಕ್ರಮಗಳ ವಿವರ:

- ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮುಖ್ಯವಾಹಿನಿಗೆ ತರಲು ರೂಪಿಸಲಾಗಿರುವ ಕಾರ್ಯತಂತ್ರಗಳು.

- ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳ ಅನುದಾನ.
- ಶಿಕ್ಷಕರು ಹಾಗೂ ಸೇವಾ ನಿರತ ಶಿಕ್ಷಕರ ತರಬೇತಿ.
- ಬಿ.ಆರ್.ಸಿ. ಮತ್ತು ಸಿ.ಆರ್.ಸಿ. ಸಂಪನ್ಮೂಲ ಕೇಂದ್ರಗಳು.
- ವಿಶೇಷ ಅಗತ್ಯವುಳ್ಳ ಮಕ್ಕಳಿಗಾಗಿ ಕಾರ್ಯಕ್ರಮಗಳು.
- ಸಂಶೋಧನೆ, ಮೌಲ್ಯಮಾಪನ, ಉಸ್ತುವಾರಿ ಮತ್ತು ಮೇಲ್ವಿಚಾರಣೆ.
- ಆವಿಷ್ಕೃತ ಚಟುವಟಿಕೆಗಳುಕಂಪ್ಯೂಟರ್ ಆಧಾರಿತ ಶಿಕ್ಷಣ, ಪರಿಶಿಷ್ಟ ಜಾತಿ/ಪಂಗಡ ಹಾಗೂ ಹೆಣ್ಣು ಮಕ್ಕಳಿಗಾಗಿ ಚಿಣ್ಣರ ಕರ್ನಾಟಕ ದರ್ಶನ ವಿಶೇಷ ಕಾರ್ಯಕ್ರಮ, ಕೇಳಿಕಲಿ ಕಾರ್ಯಕ್ರಮ ಶಾಲಾ ಪೂರ್ವ ಶಿಕ್ಷಣ.
- ಸಿವಿಲ್. ಕಾಮಗಾರಿಗಳು ಶಾಲಾ ಕಟ್ಟಡ, ಶಾಲಾ ಕೊಠಡಿ, ಕುಡಿಯುವ ನೀರು, ಶೌಚಾಲಯ ಮತ್ತು ವಿದ್ಯುಚ್ಛಕ್ತಿ ಸೌಲಭ್ಯ.

ಆ) ಮೇಲ್ಕಂಡ ಕಾರ್ಯಕ್ರಮಗಳಲ್ಲದೇ 2004–05 ಮತ್ತು 2005–06ನೇ ಸಾಲಿನಲ್ಲಿ ರಾಜ್ಯಾದ್ಯಂತ ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಕೇಂದ್ರ ಸರ್ಕಾರದಿಂದ ಅನುಮತಿ ದೊರೆತಿರುತ್ತದೆ.

- 2005–06ನೇ ಸಾಲಿನಲ್ಲಿ ಆವಿಷ್ಕೃತ ಚಟುವಟಿಕೆಯಡಿ ಪ್ರತಿ ಜಿಲ್ಲೆಯಲ್ಲಿನ 8ನೇ ತರಗತಿ ಹೊಂದಿರುವ 10 ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ "ವಿಜ್ಞಾನ ಪ್ರಯೋಗಾಲಯಗಳನ್ನು" ಸ್ಥಾಪಿಸಲು ಪ್ರತಿ ಶಾಲೆಗೆ ರೂ.50,000/ ಗಳ ಅನುದಾನ.
- 2005–06ನೇ ಸಾಲಿನಲ್ಲಿ ವಿಶೇಷ ಅಗತ್ಯವುಳ್ಳ ಮಕ್ಕಳ ಶಿಕ್ಷಣಕ್ಕಾಗಿ ಪ್ರತಿ ಬ್ಲಾಕಿಗೆ 3 ಸಂಪನ್ಮೂಲ ಶಿಕ್ಷಕರ ನೇಮಕ.
- ರಾಜ್ಯದ 58 ಶೈಕ್ಷಣಿಕವಾಗಿ ಹಿಂದುಳಿದ ಬ್ಲಾಕ್‌ಗಳಲ್ಲಿ ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ಎನ್.ಪಿ.ಇ.ಜಿ.ಇ.ಎಲ್. ಕಾರ್ಯಕ್ರಮ.
- ರಾಜ್ಯದ 58 ಶೈಕ್ಷಣಿಕವಾಗಿ ಹಿಂದುಳಿದ ಬ್ಲಾಕ್‌ಗಳಲ್ಲಿನ ಶಾಲೆಯಿಂದ ಹೊರಗುಳಿದ ಹೆಣ್ಣು ಮಕ್ಕಳನ್ನು ಮುಖ್ಯವಾಹಿನಿಗೆ ತರಲು ಪ್ರತಿ ಬ್ಲಾಕ್‌ಗೆ ಒಂದು ಕಸ್ತೂರ್‌ಬಾ ಗಾಂಧಿ ಬಾಲಿಕಾ ವಸತಿ ಶಾಲೆಗಳನ್ನು 200506ನೇ ಸಾಲಿನಲ್ಲಿ ಪ್ರಾರಂಭಿಸಲಾಗಿದೆ.
- 2005–06ನೇ ಸಾಲಿನಲ್ಲಿ ವಿಶೇಷ ಅಗತ್ಯವುಳ್ಳ ಮಕ್ಕಳ ಉಪಯೋಗಕ್ಕಾಗಿ 10 ಆಯ್ದ ಜಿಲ್ಲೆಗಳಲ್ಲಿನ ತಲಾ 4 ಶಾಲೆಗಳಲ್ಲಿ "ವಿಶೇಷ ಶೌಚಾಲಯ" ನಿರ್ಮಾಣಕ್ಕಾಗಿ ಪ್ರತಿ ಶಾಲೆಗೆ ರೂ. 10,000/ ದಂತೆ ಅನುದಾನ.
- 2005–06ನೇ ಸಾಲಿನಲ್ಲಿ ಆವಿಸ್ಕೃತ ಚಟುವಟಿಕೆಯಡಿ ಮಕ್ಕಳಿಗೆ ಜೀವನ ಕೌಶಲ್ಯ ಶಿಕ್ಷಣವನ್ನು ಪ್ರತಿ ಜಿಲ್ಲೆಯ ಒಂದು ಶಾಲೆಯಲ್ಲಿ ಒದಗಿಸಲು ತಲಾ ರೂ. 2.5 ಲಕ್ಷಗಳ ಅನುದಾನ.
- 2005–06ನೇ ಸಾಲಿನಲ್ಲಿ 1760 ಶಾಲೆಗಳಲ್ಲಿ ಚೈಲ್ಡ್ ಫ್ರೆಂಡ್ಲಿ ಎಲಿಮೆಂಟ್ಸ್ (ಬಾಲ) ಕಾರ್ಯಕ್ರಮಕ್ಕೆ ಪ್ರತಿ ಶಾಲೆಗೆ ರೂ.0.25 ಲಕ್ಷಗಳ ಅನುದಾನ.

- 2004–05ನೇ ಸಾಲಿನಿಂದ ಅಜೀಂ ಪ್ರೇಂಜಿ ಸಂಸ್ಥೆಯ ಸಹಯೋಗ ದೊಂದಿಗೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ "ಕಲಿಕಾ ಖಾತ್ರಿ" ಯೋಜನೆಯ ಅನುಷ್ಠಾನ.
- 2005–06ನೇ ಸಾಲಿನಲ್ಲಿ ತೀವ್ರತರ ಅಂಗವಿಕಲತೆ ಹೊಂದಿರುವ ಮಕ್ಕಳಿಗಾಗಿ ಗೃಹ ಆಧಾರಿತ ಶಿಕ್ಷಣ ನೀಡುವ ಸೌಲಭ್ಯ.
- 150 ಜನಸಂಖ್ಯೆ ಇರುವ ಜನವಸತಿ ಪ್ರದೇಶಗಳಲ್ಲಿನ ಮಕ್ಕಳನ್ನು ಹತ್ತಿರದ ಇ.ಜಿ.ಎಸ್. ಕೇಂದ್ರ ಅಥವಾ ಪ್ರಾಥಮಿಕ ಶಾಲೆಗೆ ಕರೆತರಲು ಸಂಚಾರಿ ಸೌಲಭ್ಯ.
- 2004–05ನೇ ಸಾಲಿನಲ್ಲಿ ವಿಶೇಷ ಅಗತ್ಯವುಳ್ಳ ಮಕ್ಕಳನ್ನು ಗುರ್ತಿಸಲು ಪರಿಣತಿ ಹೊಂದಿದ ಶಿಕ್ಷಕರಿಂದ ವಿಶೇಷ ಗಣತಿ.

ಇ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು 350 ಮಕ್ಕಳು ಚಿಣ್ಣರ ಕರ್ನಾಟಕ ದರ್ಶನದ ಸೌಲಭ್ಯವನ್ನು ಪಡೆದಿದ್ದು, ಈ ಪೈಕಿ 227 ವಿದ್ಯಾರ್ಥಿಗಳು ನಿಗದಿತ ವರ್ಗಕ್ಕೆ ಸೇರಿರುತ್ತಾರೆ.

5786 (6585) ಶ್ರೀ ಪ್ರಭಾಕರ ಬಂಗೇರ .ಕೆ (ಬೆಳ್ತಂಗಡಿ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗ್ರಾಮೀಣ ಮೂಲಭೂತ ಸೌಕರ್ಯಾಭಿವೃದ್ಧಿ ನಿಧಿ ಯೋಜನೆಯಡಿಯಲ್ಲಿ ಬೆಳ್ತಂಗಡಿ ತಾಲ್ಲೂಕು ವ್ಯಾಪ್ತಿಯಲ್ಲಿ ಕೈಗೊಂಡ ವಿವಿಧ ಕಾಮಗಾರಿಗಳ ವಿವರಗಳೇನು: (2004–05 ಮತ್ತು 2005–06ನೇ ಸಾಲಿನ ವಿವರ ನೀಡುವುದು);

ಆ) ಈ ಕಾಮಗಾರಿಗಳಿಗಾಗಿ ಮಂಜೂರು ಮಾಡಿದ ಹಣದ ಮೊತ್ತ ಎಷ್ಟು;

ಇ) ಗ್ರಾಮಾಂತರ ಪ್ರದೇಶಗಳಿಂದ ಕೂಡಿರುವ ಬೆಳ್ತಂಗಡಿ ತಾಲ್ಲೂಕು ಪ್ರದೇಶಕ್ಕೆ ಹೆಚ್ಚಿನ ಆರ್.ಐ.ಡಿ.ಎಫ್. ಕಾಮಗಾರಿಗಳನ್ನು ಮಂಜೂರು ಮಾಡಿಕೊಟ್ಟು ಗ್ರಾಮಾಭಿವೃದ್ಧಿಗೆ ಸರ್ಕಾರ ಮುಂದಾಗುವುದೇ:

(ಡಾ॥ ಹೆಚ್. ಸಿ. ಮಹದೇವಪ್ಪ, ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು.)

ಅ) ಈ ಕೆಳಕಂಡ ಕಾಮಗಾರಿಗಳನ್ನು ಗ್ರಾಮೀಣ ಮೂಲಭೂತ ಸೌಕರ್ಯಾಭಿವೃದ್ಧಿ ನಿಧಿ ಯೋಜನೆಯಡಿ ಬೆಳ್ತಂಗಡಿ ತಾಲ್ಲೂಕಿನಲ್ಲಿ ತೆಗೆದುಕೊಳ್ಳಲಾಗಿದೆ.

2004–05ನೇ ಸಾಲಿನಲ್ಲಿ ತೆಗೆದುಕೊಂಡಿರುವ ಕಾಮಗಾರಿಗಳು:

1. ಹತ್ಯಡ್ಕ ಗ್ರಾಮದ ಪರಿಷ್ಕಲ್ ಕುಂಟಲ್ಬಟ್ಟಲ್ಕೆ ರಸ್ತೆಯ 2.50 ಕಿ.ಮೀ. ನಲ್ಲಿ ಸೇತುವೆ ನಿರ್ಮಾಣ — ರೂ.10.00 ಲಕ್ಷ
2. ಒಡಿನಾಳ ಗ್ರಾಮದ ಮೈದಾಲ್ಕೆ ಕಟ್ಟದ ಬೈಲು ದೇವರಗುಂಡಿಯ ರಸ್ತೆ ಅಭಿವೃದ್ಧಿ. — ರೂ. 12.00 ಲಕ್ಷ
3. ಮಲವಂತಿಗೆ ಗ್ರಾಮದ ಅಡಕಲನಡ್ಕ ರಸ್ತೆಯ 1.00ನೇ ಕಿ.ಮೀ.ನಲ್ಲಿ ಸೇತುವೆ ನಿರ್ಮಾಣ — ರೂ. 10.00 ಲಕ್ಷ

2005–06ನೇ ಸಾಲಿನಲ್ಲಿ ತೆಗೆದುಕೊಂಡಿರುವ ಕಾಮಗಾರಿ:

1. ಶಿಭಾಜೆ ಗ್ರಾಮದ ಬಂಗಾರಡ್ಕ ಹರಿಜನ ಕಾಲೋನಿ ರಸೆ ಅಭಿವೃದ್ಧಿ. — ರೂ.13.00 ಲಕ್ಷ